**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ**

**ಸಿ.ಸಿ.ನಂ.1284/2022**

| | | | |
|---|---|---|---|
| ಹೆಸರು | : | ಸದಾಶಿವಪ್ಪ | ಪಿ.ಡಬ್ಲ್ಯೂ :3 |
| ತಂದೆ ಹೆಸರು | : | ಲೇಟ್ ಸುಬ್ಬಯ್ಯ | ಸಿ.ಡಬ್ಲ್ಯೂ :3 |
| ವಯಸ್ಸು | : | 49 ವರ್ಷ | |
| ಉದ್ಯೋಗ | : | ಹೋಟೆಲ್ ಕೆಲಸ | |
| ವಾಸಸ್ಥಳ | : | ಕುಂದಾಪುರ | |

ಸಾಕ್ಷಿಯನ್ನು ದಿಃ 14.02.2024 ರಂದು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ನಿಪಿ - 2 ರಲ್ಲಿ ಸಾಕ್ಷಿ ತಮ್ಮ ಸಹಿ ಗುರುತಿಸುತ್ತಾರೆ. ಸಹಿಯನ್ನು ನಿಪಿ - 2 ಬಿ ಎಂದು ಗುರುತಿಸಲಾಯಿತು. ದಿಃ15.02.2022 ರಂದು ಮಧ್ಯಾಹ್ನ 2.45 ರ ಸಮಯದಲ್ಲಿ ಸಿ.ವಿ.ಆರ್. ಬಾರ್ ಹತ್ತಿರ ಲಕ್ಷ್ಮೀ ಎಂಟರ್ ಪ್ರೈಸಸ್ ಹತ್ತಿರ ನಮ್ಮ ಉಡುಪಿ ಗ್ರ್ಯಾಂಡ್ ಹೋಟೆಲ್ ನಲ್ಲಿ ಕೆಲಸ ಮಾಡುತ್ತಿದ್ದ ಪ್ರಕಾಶ್ ರವರಿಗೆ ಅಪಘಾತ ಆಗಿದೆ ಎಂದು ತಿಳಿದು ಬಂತ್ತು. ಹೀರೋ Splendor ವಾಹನ ಕಪ್ಪು ಬಣ್ಣದ್ದು, ನಂಬರ್ ಕೆಎ-06-ಇಎನ್-4504 ಇದು ಅಪಘಾತ ಪಡಿಸಿತ್ತು, ಪ್ರಕಾಶ್ ರಸ್ತೆ ಬದಿಯಲ್ಲಿ ಬಿದ್ದಿದ್ದ. ಪ್ರಕಾಶ್ ನಿಗೆ ಎಚ್ಚರ ಇರಲಿಲ್ಲ, ಕೈ ಕಾಲು ಮೈಗೆಲ್ಲ ಪೆಟ್ಟಾಗಿತ್ತು. ಮಧ್ಯಾಹ್ನ 2.45 ಕ್ಕೆ ಪೊಲೀಸರು ಅಲ್ಲಿಗೆ ಬಂದಿದ್ದು, ನಿಪಿ- 2 ಅನ್ನು ಬರೆದುಕೊಂಡರು. ನನ್ನ ಸಹಿ ತೆಗೆದುಕೊಂಡರು. ಆಗ ಮಂಜುನಾಥ್ ಸಹ ಸಹಿ ಮಾಡಿದ್ದಾರೆ. ಅಪಘಾತ ಸ್ಥಳವನ್ನು ಮಣಿಕಂಠ ತೋರಿಸಿದರು. ಆಗ ಅಪಘಾತ ಪರಿಸಿದ ವಾಹನವನ್ನು ಪೊಲೀಸರು ವಶಪಡಿಸಿಕೊಂಡರು.

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ</u>-

ಪ್ರಕಾಶ್ ನ ತಂದೆ ಹೆಸರು ಬಚ್ಚೇಗೌಡರು. ಅವರ ಊರು ಆಲೂರು. ನಿಪಿ- 2 ರಲ್ಲಿ ಏನು ಬರೆದಿದೆ ಎಂದು ಪೊಲೀಸರು ನನಗೆ ಓದಿ ಹೇಳಿದ್ದರು, ಈಗ ನೆನಪಿಲ್ಲ ಹೇಳಲು ಆಗುವುದಿಲ್ಲ. ಪೊಲೀಸರು ಬಂದಾಗ ಅಲ್ಲಿ 7-8 ಜನ ಇದ್ದರು. ಅಪಘಾತವಾದ ರಸ್ತೆಯಲ್ಲಿ ಯಾವಾಗಲೂ ಜನ ಓಡಾಡುತ್ತಿರುತ್ತಾರೆ ಎಂದರೆ ಸರಿ. ನಾವು ಪೊಲೀಸರ ಜೊತೆ ಶಾಮಿಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸ್ಥಳದ ಪೂರ್ವಕ್ಕೆ ತುಮಕೂರು ರಸ್ತೆ, ಪಶ್ಚಿಮಕ್ಕೆ ಗುಬ್ಬಿಯಪ್ಪನ ದೇವಸ್ಥಾನ, ಉತ್ತರಕ್ಕೆ ನೆನಪಿಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
(ಉಂಡಿ ಮಂಜುಳ ಶಿವಪ್ಪ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.